<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ</u>

ಪಿ ಸಿ ಆರ್ <u>ಸಂಖ್ಯೆ 996/2015</u> **PW**-3

<u>ಸಾಕ್ಷಿಯನ್ನು ದಿಃ 22.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಹೆಸರುಃ | ಆದರ್ಶ ಕೆ ಹೆಚ್ |
| ತಂದೆಯ ಹೆಸರುಃ | ಕೆ ಜಿ ಹೇಮಣ್ಣಶೆಟ್ಟಿ |
| ವಯಸ್ಸುಃ | 34 ವರ್ಷ |
| ವೃತ್ತಿಃ | ಖಾಸಗಿ ಕೆಲಸ |
| ವಾಸ ಸ್ಥಳಃ | ಕಿಕ್ಕೇರಿ ಗ್ರಾಮ |

<u>ಮುಖ್ಯ ವಿಚಾರಣೆ ಃ ಪಿರ್ಯಾದಿ ಪರ ಶ್ರೀಮತಿ ಹೆಚ್ ಆರ್ ಪಿ ವಕೀಲರಿಂದ ಃ</u>

ಚಾಸಾ-1 ರವರ ಮನೆಯ ಮೇಲಿನ ರೂಮಿನಲ್ಲಿ ನಾನು 2012 ರಿಂದ 2014 ರವರೆಗೆ ಬಾಡಿಗೆಗೆ ವಾಸವಿದ್ದೆ.

ದಿಃ 14.08.2013 ರಂದು ಬೆಳಗ್ಗೆ 10.00 ಗಂಟೆ ಸಮಯದಲ್ಲಿ ನಾನು ರೂಮಿನಲ್ಲಿದ್ದು, ಆಫೀಸ್ ಗೆ ಹೋಗಲು ರೂಮಿನಿಂದ ಹೊರಗೆ ಬಂದಾಗ, ಫ್ರಾಸಾ-1 ರವರ ಮನೆಯ ಬಳಿ ಗಲಾಟೆಯಾಗುತ್ತಿದ್ದು, ಕಲ್ಲು ಕಂಬಗಳನ್ನು ಸುಮಾರು 7-8 ಜನ ಹೊಡೆದು ಹಾಕಲಾಗಿತ್ತು. ಅಲ್ಲಿ ಇನ್ನು ಗಲಾಟೆ ನಡೆಯುತ್ತಿದ್ದು, ಸುಂದರ್ ರಾಜ್ ಮತ್ತು ಅವರ ತಾಯಿ ಅವರಿಗೆ ಅಲ್ಲಿದ್ದ 7-8 ಜನ ಕೈಗಳಿಂದ ಹೊಡೆಯುತ್ತಿದ್ದರು. ಅಲ್ಲಿಯೇ ಕಾರ್ತಿಕ್ ಎಂಬುವವರು ವಿಡಿಯೋ ಸಹ ಮಾಡುತ್ತಿದ್ದರು. ಜಲೇಂದ್ರ ರವರು ಸಹ ಜಗಳನ್ನು ಬಿಡಿಸಲು ಪ್ರಯತ್ನಿಸುತ್ತಿದರು. ತಕ್ಷಣ ಅಲ್ಲಿದ್ದ ಯಾರೋ ಒಬ್ಬರು ಆಂಬುಲೆನ್ಸ್‌ಗೆ ಕರೆ ಮಾಡಿ ಆಂಬುಲೆನ್ಸ್‌ನಲ್ಲಿ ಸುಂದರ್ ರಾಜ್ ಮತ್ತು ಅವರ ತಾಯಿಯನ್ನು ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿದ್ದ 7-8 ಜನರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿರುವ 8ನೇ ಆರೋಪಿಯನ್ನು ಗುರುತಿಸಿರುತ್ತಾರೆ.

(ಉಳಿದ ಆರೋಪಿಗಳು ಗೈರು ಹಾಜರಿದ್ದು ಆರೋಪಿತರ ಪರ ವಕೀಲರು ಆರೋಪಿಗಳನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ).

**ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**